ಶ್ರೀ ಎಸ್. ಆರ್. ಕಂಠಿ.—ಕೆಲವರಿಗೆ ಖಾಯಂ ಆಗಿವೆ, ಕೆಲವರಿಗೆ ಆಗಿಲ್ಲ. ಇದಕ್ಕೆ ಕಾರಣ ಎಲ್ಲಿ ವರ್ಕ್ ಲೋಡ್ ಕಡಿಮೆ ಇರುತ್ತದೆ ಅಲ್ಲಿ ಫುಲ್ ಟೈಂ ಟೀಚರ್ಸನ್ನು ಇಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಎಸ್. ಎಸ್. ಎಲ್. ಸಿ. ಕ್ವಾಲಿಫಿಕೇಷನ್ ಇರತಕ್ಕ ಮಿಡ್ಲ್ ಸ್ಕೂಲ್ ಉಪಾಧ್ಯಾಯರಿಗೂ 80-150ರ ಗ್ರೇಡು, ಎಸ್. ಎಸ್. ಎಲ್. ಸಿ. ಅದರ ಜೊತೆಗೆ ಮ್ಯೂಸಿಕ್ ಕ್ವಾಲಿಫಿಕೇಷನ್ ಇರತಕ್ಕ ಉಪಾಧ್ಯಾಯರಿಗೂ 80-150ರ ಗ್ರೇಡು ಕೊಟ್ಟಿದ್ದೀರಿ, ಆದ್ದರಿಂದ ಎಷ್ಟೋ ಜನ ಮ್ಯೂಸಿಕ್ ಟೀಚರ್ಸ್ ಈ ಕೆಲಸಕ್ಕೆ ಸೇರದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಎಸ್. ಎಸ್. ಎಲ್. ಸಿ. ಆಗಿದ್ದು ಮ್ಯೂಸಿಕ್ ಕ್ವಾಲಿಫಿಕೇಷನ್ ಇರಬೇಕೆಂಬ ನಿಯಮ ಇದೆ, ಇಲ್ಲದೆ ಇದ್ದರೆ ಅವರಿಗೆ ಇನ್‌ಕ್ರಿಮೆಂಟ್ ಸಿಕ್ಕುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಈಗ ಪಾರ್ಟ್ ಟೈಂ ಆಗಿ ಕೆಲಸ ಮಾಡುತ್ತಾ ಇರತಕ್ಕ ಉಪಾಧ್ಯಾಯರನ್ನು ಪ್ರಾಥಮಿಕ ಶಾಲೆಗಳಲ್ಲಿ ಖಾಯಂ ಮ್ಯೂಸಿಕ್ ಟೀಚರ್ಸ್ ಆಗಿ ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ವರ್ಕ್ ಲೋಡ್ ಇದ್ದರೆ ಮಾಡುತ್ತಾರೆ, ಅಲ್ಲಿ ಫುಲ್ ವರ್ಕ್ ಲೋಡ್ ಇರುವುದಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಕುಂಟರು, ಕುರುಡರನ್ನು ನೇಮಕ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಒಪ್ಪುವುದಿಲ್ಲ, ಅವರು ಪಾಠ ಹೇಳುತ್ತಾ ಇದ್ದರೆ ಹುಡುಗರು ಎದ್ದು ಹೊರಟು ಹೋಗುತ್ತಾರೆ ಎಂದು ತಾವು ಹೇಳುತ್ತಾ ಇದ್ದೀರಿ, ಸ್ಕೂಲ್‌ನಲ್ಲಿ ಯಾವಾಗಲೂ ಹೆಡ್ ಮಾಸ್ಟರು ಇರುತ್ತಾರೆ, ಅಲ್ಲದೇ ನಮಗಿಂತಲೂ ಬಹಳ ಚುರುಕಾಗಿ ಯಾರು ಏನು ಮಾಡುತ್ತಾರೆ, ಇದ್ದಾರೆಯೋ ಇಲ್ಲವೇ ಎಂಬುದನ್ನು ತಿಳಿದುಕೊಳ್ಳತಕ್ಕ ಶಕ್ತಿ ಕುರುಡರಿಗೆ ಇರುತ್ತದೆ. ಆ ದೃಷ್ಟಿಯಿಂದ ಕುರುಡರಿಗೆ ಈ ಒಂದು ಅವಕಾಶವನ್ನು ಕಲ್ಪಿಸಿಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ನಾನು ಹೇಳಿದ್ದು ನಮ್ಮ ಡಿಪಾರ್ಟ್‌ಮೆಂಟಿನ ಅನುಭವ, ತಾವು ತಮ್ಮ ಅನುಭವವನ್ನು ಹೇಳುತ್ತಾ ಇದ್ದೀರಿ. ಇಲ್ಲಿ ಇರತಕ್ಕ ಒಂದು ಪ್ರಶ್ನೆ ಏನೆಂದರೆ, ಅವರಿಗೆ ಅಸಿಸ್ಟೆಂಟ್ ಟೀಚರ್ಸನ್ನು ಜೊತೆಗೆ ಕೊಟ್ಟು ಅವರನ್ನು ಮ್ಯೂಸಿಕ್ ಟೀಚರ್ಸ್ ಆಗಿ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಿ ನೋಡುತ್ತಾ ಇದ್ದೇವೆ.

Policy regarding Supply of Power to I. P. Sets.

*Q.—10. Sri M. C. BASAPPA (Chamarajanagar).—

Will the Government be pleased to state :—

(a) whether there is any change of policy by the State Electricity Board regarding supply of power to irrigation pumpsets ;

(b) whether there is any difference in policy between the Crash Programme and the normal programme regarding supply of power to irrigation pumpsets ;

(c) if there is any difference whether it would make any material alteration in the normal programme ?

A.—Sri VEERENDRA PATIL (Minister for Public Works).—

(a) The original ceiling limit of Rs. 2500 was reduced in June 1965 fixing generally the ceiling limit at Rs. 600 per H. P. schemes, costing more than Rs. 600 per H. P. being considered by the Board. However, this ceiling limit has since been removed by the Board in its order issued in December 1965 and the *status quo ante* restored.

(*b*) There is no material difference between the Crash Programme and the Normal Programme.

(*c*) Does not arise.

ಶ್ರೀ ಎಂ. ಸಿ. ಬಸಪ್ಪ.—2,500 ರೂಪಾಯಿಗಳಿಂದ 600 ರೂಪಾಯಿಗಳಿಗೆ ಬದಲಾವಣೆ ಮಾಡುವುದಕ್ಕೆ ಮಹತ್ತರವಾದ ಕಾರಣವೇನಿತ್ತು ?

Mr. SPEAKER.—It has been restored. It was due to a mistake. That mistake is rectified.

Sri M. C. BASAPPA—Government had taken a decision.

Mr. SPEAKER.—It is only with regard to Crash Programme. The Chair has no objection if the Minister answers.

† **Sri G. B. SHANKAR RAO** (Parliamentary Secretary to the Minister for Public Works).—Because of the shortage of line material, we brought down the limit to Rs. 600 so that more number of sets can be serviced with minimum quantum of materials.

ಶ್ರೀ ಎಂ. ಸಿ. ಬಸಪ್ಪ.—ಶಾರ್ಟೇಜ್ ಆಫ್ ಮೆಟೀರಿಯಲ್ ಇದ್ದುದರಿಂದ ಸೀಲಿಂಗ ಲಿಮಿಟ್ ಕಡಿಮೆ ಮಾಡಲಾಗಿತ್ತು ಎಂದು ಹೇಳಿದಿರಿ. ಈಗ ಸೀಲಿಂಗ ಲಿಮಿಟ್ 600 ರೂಪಾಯಿ ಪರ್ ಎಚ್. ಪಿ. ಸ್ಕೀಂಗೆ ಇದ್ದುದನ್ನು 2500 ರೂಪಾಯಿಗೆ ಏರಿಸಿರುವುದರಿಂದ ಮೆಟೀರಿಯಲ್ ಪೊಜಿಷನ್ ಏನಾದರೂ ಇಂಪ್ರೂವ್ ಆಗಿದೆಯೇನು ಸ್ವಾಮಿ ?

ಶ್ರೀ ಜಿ. ಬಿ. ಶಂಕರರಾವ್.—ಆಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಈಗ 2,500 ರೂಪಾಯಿ ಪರಿಮಿತಿ ಇಟ್ಟುಕೊಂಡು ಕೆಲಸ ಮಾಡತಕ್ಕದ್ದು ಕ್ರ್ಯಾಶ್ ಪ್ರೋಗ್ರಾಂ ತೆಗೆದುಕೊಂಡಿದ್ದರೆ ಮಾತ್ರ ಅನ್ವಯಿಸುತ್ತೀರಿ. ನಾರ್ಮಲ್ ಕೆಲಸ ತೆಗೆದುಕೊಂಡಿದ್ದರೆ 600 ರೂಪಾಯಿ ಲಿಮಿಟ್ ಇದೆ ಎಂದು ಇಲೆಕ್ಟ್ರಿಸಿಟಿ ಬೋರ್ಡಿನ ಹೇಳತಕ್ಕಂಥಾದ್ದು ಇದೆ ಅಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಮೊದಲು ಇರತಕ್ಕ 2500 ರೂಪಾಯಿ ಪರ್ ಎಚ್. ಪಿ. ಸ್ಕೀಂ ಸೀಲಿಂಗ ಲಿಮಿಟ್ ಇದನ್ನು 600 ರೂಪಾಯಿ ಎಂದು ಮಾಡಲಾಗಿತ್ತು. ಆದರೆ ಅನೇಕ ಜನರಿಂದ ಈ ಬಗ್ಗೆ ಕಂಪ್ಲೇಂಟ್ಸ್ ಬಂದವು. ಆಮೇಲೆ 600 ರೂಪಾಯಿ ಇರುವುದನ್ನು ಏರಿಸಿ 2500 ರೂಪಾಯಿ ಎಂದು ಮಾಡಲಾಯಿತು. 600 ರೂಪಾಯಿ ಇದ್ದಾಗಲೂ ಕೂಡ ಅದಕ್ಕೂ ಹೆಚ್ಚಿನ ಕೆಲಸ ಮಾಡಬಾರದು ಎಂದು ಇದ್ದಿರಲಿಲ್ಲ. 600 ರೂಪಾಯಿ ಲಿಮಿಟ್‌ವರೆಗೆ ಕೆಲಸ ಇದ್ದರೆ ಮಾಡಬಹುದು. ಅದಕ್ಕೂ ಮೇಲ್ಪಟ್ಟು ಕೆಲಸ ಇದ್ದರೆ ಅಂಥಾದ್ದು ಬೋರ್ಡಿನ ಅನುಮತಿಗೆ ಬರಬೇಕು ಎಂದು ಇದ್ದಿತು. ಈ ರೀತಿ ಯಾಕೆ ಮಾಡಿತು ಅಂದರೆ ಇರತಕ್ಕ ಮೆಟೀರಿಯಲ್ ಸ್ವಲ್ಪ ಇದೆ, ಇದರಿಂದ ಮ್ಯಾಗ್ಝಿಮಂ ಬೆನಿಫಿಟ್ ಆಗಬೇಕು ಎಂಬ ಉದ್ದೇಶ ಇದ್ದಿತು. ಈಗ ಅದನ್ನು ರಿಲ್ಯಾಕ್ಸ್ ಮಾಡಿ 2,500 ರೂಪಾಯಿ ಲಿಮಿಟ್‌ಗೆ ಏರಿಸಿರುತ್ತೇವೆ. ರಿಸ್ಟ್ರಿಕ್ಷನ್ಸ್ ವಿಥ್‌ಡ್ರಾ ಮಾಡಿದ್ದೇವೆ.

ಶ್ರೀ ಜಿ. ವಿ. ಗೌಡ.—600 ರೂಪಾಯಿ ಲಿಮಿಟ್ಟಿಗೆ ಮೇಲ್ಪಟ್ಟು ಇರತಕ್ಕಂಥ ಎಸ್ಟಿಮೇಟು ಬೋರ್ಡಿನ ಮಂಜೂರಾತಿಗೆ ಬಂದಿವೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ. ಆದರೂ ಕೂಡ ಲೈನ್ ಪೊಜಿಷನ್ ಏನು ಇದೆ ಅದನ್ನು ನೋಡಿಕೊಂಡು ಮಾಡುತ್ತಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಐ.ಪಿ. ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದಕ್ಕಾಗಿ ಶರಾವತಿ ಯೋಜನೆಯನ್ನು ಪ್ರಾರಂಭ ಮಾಡಿದಿರಿ. ಈ ವಿದ್ಯುತ್ ಶಕ್ತಿ ಬೇಡಿಕೆ ಒದಗಿಸುವುದಕ್ಕೆ ಏನೇನು ಸಲಕರಣೆಗಳು ಬೇಕು ಎಂಬುದನ್ನು ಮುಂದಾಲೋಚನೆ ಮಾಡಿರಲಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಶರಾವತಿ ಯೋಜನೆಗೂ ಐ.ಪಿ. ಸೆಟ್ಸ್ ಸರ್ವಿಸಿಂಗಿಗೂ ಏನು ಸಂಬಂಧ ಇದೆ ?

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಶರಾವತಿ ಯೋಜನೆಯಲ್ಲಿ ಉತ್ಪಾದಿಸುವ ವಿದ್ಯುತ್ ಶಕ್ತಿಯನ್ನು ಆಂಧ್ರ ದೇಶಕ್ಕೂ ಮದ್ರಾಸಿಗೂ ಕೊಡಬೇಕೆಂದು ಮಾಡಿದ್ದೀರಿ. ನಮ್ಮ ದೇಶದಲ್ಲಿ ವ್ಯವಸಾಯಕ್ಕೆ ಉಪಯೋಗಿಸಲು ಶರಾವತಿ ವಿದ್ಯುತ್ ಶಕ್ತಿ ಕೊಡದೇ ಆಂಧ್ರಕ್ಕೆ ಕೊಡಬೇಕೆಂದು ಮಾಡಿರುವುದು ಸರಿಯೇ ?

ಶ್ರೀ ವೀರೇಂದ್ರ ಪಾಟೀಲ್.—ಆಂಧ್ರ ದೇಶಕ್ಕೆ ಮದ್ರಾಸಕ್ಕೆ ವಿದ್ಯುತ್ ಶಕ್ತಿ ಕೊಡಬೇಕೆಂದು ಶರಾವತಿ ಯೋಜನೆ ತೆಗೆದುಕೊಂಡಿಲ್ಲ. ಶರಾವತಿಯಲ್ಲಿ ಉತ್ಪಾದನೆಯಾಗುವ ಎಲ್ಲಾ ವಿದ್ಯುತ್ ಶಕ್ತಿಯನ್ನು ನಾವೇ ಬಳಕೆಯಲ್ಲಿ ತರಬೇಕೆಂದು ಉದ್ದೇಶ ಇದೆ. ಆದರೆ ದುರ್ದೈವದಿಂದ ಪರಿಸ್ಥಿತಿ ಏನಾಗಿದೆ ಅಂದರೆ, ಶರಾವತಿ ವಿದ್ಯುತ್ ಶಕ್ತಿ ಉಪಯೋಗಿಸುವುದಕ್ಕೆ ಬೇಕಾಗಿರುವ ಯುಟಿಲೈಜೇಷನ್ ಲೈನ್ ಮೆಟೀರಿಯಲ್ ಸಾಕಷ್ಟು ಸಿಕ್ಕುತ್ತಾ ಇಲ್ಲ. ವಿಶೇಷವಾಗಿ ಬೇಕಾದ ಕಂಡಕ್ಟರ್ಸ್ ಅಲ್ಯೂಮಿನಿಯಂ ಪರದೇಶದಿಂದ ಇಂಪೋರ್ಟ್ ಮಾಡಬೇಕಾಗುತ್ತದೆ. ನಮ್ಮ ದೇಶದಲ್ಲಿ ಸೇಕಡ 50 ರಷ್ಟು ಸಹ ಇವುಗಳ ಪ್ರೊಡಕ್ಷನ್ ಇಲ್ಲ. ಹೊರಗಿನಿಂದ ತರಿಸಬೇಕಾದರೆ ಫಾರೆನ್ ಎಕ್ಸ್‌ಚೇಂಜ್ ಬೇಕಾಗುತ್ತದೆ. ಇದರ ಪರಿಸ್ಥಿತಿ ಬಿಗಿಯಾಗಿ ಇರುವುದರಿಂದ ಅಲ್ಯೂಮಿನಿಯಂ ಸಾಕಷ್ಟು ಬರುತ್ತಾ ಇಲ್ಲ. ಕಂಡಕ್ಟರ್ಸ್ ಇಲ್ಲದೆ ದೊಡ್ಡ ತೊಂದರೆಯಾಗಿದೆ. ಟ್ರಾನ್ಸ್‌ಫಾರ್ಮರ್ಸ್ ಕೂಡ ಬೇಕಾಗುತ್ತದೆ. ಅವಕ್ಕೆ ಬೇಕಾದಂಥ ಕಾಪರ್ ಕೂಡ ಹೊರಗಿನಿಂದ ಇಂಪೋರ್ಟ್ ಮಾಡಬೇಕಾಗುತ್ತದೆ. ಫಾರೆನ್ ಎಕ್ಸ್‌ಚೇಂಜ್ ಕಷ್ಟ ಇರುವುದರಿಂದ ತೊಂದರೆಯಾಗಿದೆ. ಇದಕ್ಕೂ ಮೊದಲು ಯೋಚನೆ ಮಾಡಿಲ್ಲ ಎಂದು ಅಲ್ಲ. ಎಲ್ಲವನ್ನೂ ಯೋಚನೆ ಮಾಡಿಯೇ ಕೋಟ್ಯಾಂತರ ರೂಪಾಯಿ ಲೈನ್ ಮೆಟೀರಿಯಲ್ ಆರ್ಡರ್ ಮಾಡಿದ್ದೇವೆ. ಮೆಟೀರಿಯಲ್ ಬರುತ್ತದೆ. ಒಟ್ಟಿನಲ್ಲಿ ಬೇರೆ ಯಾವ ರಾಜ್ಯಕ್ಕಿಂತಲೂ ನಮ್ಮ ರಾಜ್ಯದ ಪರಿಸ್ಥಿತಿ ಉತ್ತಮ ಇದೆ ಎಂದು ಹೇಳುತ್ತೇನೆ.

ಶ್ರೀ ಜಿ. ದುಗ್ಗಪ್ಪ.—ಸ್ವಾಮಿ, ಚಿತ್ರದುರ್ಗ ಡಿವಿಜನ್ನಿನಲ್ಲಿ ಬೇರೆ ಕಾರಣಕ್ಕೋಸ್ಕರ ಕೆಲವು ಸಹಕಾರಿ ಸಂಸ್ಥೆಗಳಿಗೆ ಅಧಿಕಾರಿಗಳು ಐ. ಪಿ. ಸೆಟ್ಸ್ ಮಂಜೂರು ಮಾಡಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಬಂದಿಲ್ಲ.

ಶ್ರೀ ಜಿ. ರಾಮೇಗೌಡ.—ಪಂಪ್‌ಸೆಟ್ಸ್ ಸರ್ವಿಸ್ ಸಾಮಾನುಗಳನ್ನು ಡಿವಿಜನ್ನಿಗೆ ಒದಗಿಸುವ ವಿಚಾರದಲ್ಲಿ ಸರಕಾರದ ಪಾಲಿಸಿ ಏನು ಇದೆ ?

ಶ್ರೀ ವೀರೇಂದ್ರ ಪಾಟೀಲ್.—ಪ್ರತಿ ವರ್ಷ ಚೇರ್‌ಮನ್ನರು ಎಗ್ಸಿಕ್ಯೂಟಿವ್ ಎಂಜಿನಿಯರ್ ಸೂಪರಿಂಟೆಂಡಿಂಗ್ ಎಂಜಿನಿಯರ್ ಚೀಫ್ ಎಂಜಿನಿಯರ್ ಇವರನ್ನು ಅವರು ಕರೆಸುತ್ತಾರೆ ಇಂಪ್ಲಿಮೆಂಟ್ ಎಷ್ಟು ಬಂದಿದೆ, ಪೊಟೆನ್ಸಿಯಾಲಿಟಿ ಏನು ಇದೆ ಎಂಬುದನ್ನು ನೋಡಿಕೊಂಡು ಇರತಕ್ಕ ಮೆಟೀರಿಯಲ್‌ನ್ನು ಅದಕ್ಕೆ ಅನುಗುಣವಾಗಿ ಹಂಚುತ್ತಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ವಿದ್ಯುತ್ ಶಕ್ತಿ ಪೂರೈಕೆಗೆ ಏನು ಸಲಕರಣೆ ಬೇಕಾಗುತ್ತದೆ ಎಂಬುದನ್ನು ಮುಂದಾಲೋಚನೆ ಮಾಡಿದ್ದರೆ ಕಷ್ಟ ಬರುತ್ತಾ ಇರಲಿಲ್ಲ. ತಾಲ್ಲೂಕ ವೈಜ್ ಅಲಾಟ್ ಮಾಡಿದರೆ ಅನುಕೂಲವಾಗುತ್ತದಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಮುಂದಾಲೋಚನೆ ಮಾಡಿದ್ದೇವೆ. ಮುಂದಾಲೋಚನೆ ಮಾಡದೇ ಹೋಗಿದ್ದರೆ ಇವತ್ತಿನ ದಿವಸ ಯಾವ ಕೆಲಸವೂ ಆಗುತ್ತಿರಲಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಮಂಜೂರು ಆಗದೇ ಇರತಕ್ಕ ಬೋರ್ಡಿಗೆ ಬಂದ ಅರ್ಜಿಗಳು ಎಷ್ಟು ಇವೆ ?

ಶ್ರೀ ವೀರೇಂದ್ರ ಪಾಟೀಲ್.—ನೋಟೀಸ್ ಬೇಕು.

ಶ್ರೀ ಆರ್. ಕೆಂಚಪ್ಪ.—ವಿದ್ಯುತ್ ಶಕ್ತಿ ಇಲ್ಲದೆ ರೈತ ಕಷ್ಟಪಡುತ್ತಿದ್ದಾನೆ. ಸಂಬಂಧಪಟ್ಟ ಅಧಿಕಾರಿಗಳು ಒಂದೆರಡು ಕಂಬ ಒದಗಿಸಿ ಜಾಗ್ರತೆ ವಿದ್ಯುತ್ ಶಕ್ತಿ ಸರಬರಾಜು ಮಾಡುವ ಅನುಕೂಲತೆ ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಒಂದೆರಡು ಕಂಬ ಕೊಡುವುದು ಅಷ್ಟೇ ಅಲ್ಲ. ಎಲ್ಲ ಕಡೆ ವಿದ್ಯುತ್ ಶಕ್ತಿ ಕೊಡಬೇಕು ಎಂದು ಟಾರ್ಜೆಟ್ ಇದೆ. ಇದಕ್ಕೆ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅವಶ್ಯಕ ಮೆಟೀರಿಯಲ್ ಕೊಟ್ಟಿದ್ದೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ಉಳಿದ ರಾಜ್ಯ ಸರಕಾರಗಳು ಅನುಕೂಲ ಮಾಡಿಕೊಂಡಿವೆ. ನಮಗೆ ಮಾತ್ರ ಫಾರೆನ್ ಎಕ್ಸ್‌ಚೇಂಜ್ ತೊಂದರೆ ಏನು ಇದೆ ?

ಶ್ರೀ ವೀರೇಂದ್ರ ಪಾಟೀಲ್.—ಎರಡನೇ ಸ್ಟೇಟ್‌ಕ್ಕಿಂತ ನಮ್ಮ ಪರಿಸ್ಥಿತಿ ಉತ್ತಮ ಇದೆ ಎಂದು ನಾನು ಆಗಲೇ ಹೇಳಿದೆ. ಇಡೀ ದೇಶಕ್ಕೇ ಬಂದಂಥ ಸಮಸ್ಯೆ ಇದಾಗಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅನೇಕ ಕಡೆ ಲೈನ್ ಹಾಕಿದೆ ಆದರೆ ಅಂಥಲ್ಲಿ ಪಂಪ್‌ಸೆಟ್ಸ್ ಕೊಟ್ಟಿಲ್ಲ. ಕೆಲವು ಕಡೆ ಬಾವಿ ಇಲ್ಲದೇನೆ ಪಂಪ್‌ಸೆಟ್ಸ್ ಕೊಟ್ಟಿದ್ದೀರಿ. ಇಂಥಾದ್ದನ್ನು ಸರಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಈ ಪರಿಸ್ಥಿತಿ ಸರಕಾರದ ಗಮನಕ್ಕೆ ಮೊದಲು ಬಂದಿದೆ. ಲೈನ್ ಇಲ್ಲದ ಕಡೆ ಪಂಪ್‌ಸೆಟ್ಸ್ ಕೊಡಕೂಡದು ಎಂದು ತಿಳಿಸಿವೆ. ಆದುದರಿಂದ ಡಿಸ್ಟ್ರಿಕ್ಟ್ ಕೋ-ಆರ್ಡಿನೇಟಿಂಗ್ ಕಮಿಟಿಯಲ್ಲಿ ಎಕ್ಸಿಕ್ಯೂಟಿವ್ ಎಂಜಿನಿಯರ್ ಅವರನ್ನು ಕರೆಸಬೇಕು ಎಂದಿದೆ. ಲೈನ್ ಹಾಕಿದ್ದರೆ ಪಂಪ್‌ಸೆಟ್ಸ್ ಹಂಚಬೇಕು ಎಂದು ಮಾಡಿದೆ. ಇತ್ತೀಚೆಗೆ ಅಂಥ ಪರಿಸ್ಥಿತಿ ಇಲ್ಲ.

Mr. SPEAKER.—Question No. 225, Sri M. N. Krishna Singh.

ಶ್ರೀ ಎಂ. ಎನ್. ಕೃಷ್ಣಸಿಂಗ್.—ಈ ನನ್ನ ಪ್ರಶ್ನೆಗೆ ಸಂಬಂಧಪಟ್ಟ ಕಾಮಗಾರಿ ಈಗಾಗಲೇ ಸಿದ್ಧವಾಗಿರುವುದರಿಂದ ನಾನು ಪ್ರಶ್ನೆಯನ್ನು ಹಾಕುವುದಿಲ್ಲ.

Supply of Power to I.P. Sets.

**Q.*—268. Sri R. KENCHAPPA (Pavagada).—

Will the Government be pleased to state :—

(*a*) whether t has come to the notice of the concerned Department, that inconvenience is caused to the ryots in supplying power to I.P. sets in Nagalamadike Hobli, Pavagada Taluk, due to the new policy of Mysore State Electricity Board :

(*b*) whether the inconvenience is not due to the concerned Department not having drawn power lines in spite of the fact that some ryots of the hobli deposited the prescribed amount for the I.P. sets about 10 to 12 years back ;

(*c*) whether the concerned Department would take steps to supply power as early as possible by not applying the new policy of M S E B as this taluk is often affected by famine ?

A.—Sri VEERENDRA PATIL (Minister for Public Works).—

(*a*) Yes. Original ceiling limit of Rs. 2,500 per horse power has since been restored.

(*b*) Only four parties belonging to Nagalamadike Hobli paid Earnest Money Deposit during July 1957. The others paid it during 1961 and 1963. The finalisation of the Scheme for arranging power supply was delayed since the concerned parties did not produce necessary records for water rights in the wells, etc., in time.

(*c*) Yes.

ಶ್ರೀ ಆರ್. ಕೆಂಚಪ್ಪ.—ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಿದೆ. 1957ನೇ ಇಸವಿಯಲ್ಲಿಯೇ ಕೆಲವು ಗ್ರಾಮಗಳವರು ತಮ್ಮ ಹಣವನ್ನು ಠೇವಣಿ ಮಾಡಿದ್ದರೂ ಇಲ್ಲಿಯವರೆಗೂ ಆ ಗ್ರಾಮಗಳ ಸರ್ವೆಯಾಗಿಲ್ಲ, ಲೈನ್ಸ್ ಸಹ ಹಾಕಿಲ್ಲ, ಇದು ಕ್ಷಾಮ ಪ್ರದೇಶವಾಗಿರುವುದರಿಂದ ಆ ಬಗ್ಗೆ ಹೆಚ್ಚಿನ ಆದ್ಯತೆ ಕೊಟ್ಟು ಆದಷ್ಟು ಜಾಗ್ರತೆ ಅಲ್ಲಿಗೆ ವಿದ್ಯುಚ್ಛಕ್ತಿ ಒದಗಿಸಲು ತಕ್ಕ ಕ್ರಮವನ್ನು ಸರ್ಕಾರದವರು ಕೈಗೊಳ್ಳುತ್ತಾರೆಯೇ ?

Sri G. B. SHANKARA RAO (Parliamentary Secretary to the Minister for Public Works).—There is no difficulty of servicing I.P. sets or providing electricity wherever the conditions that are required to be fulfilled are complied with.

Sri SANJEEVANATH AIKALA.—Is it a fact that the Forest Department has refused to give seasoned wooden poles to the Mysore State Electricity Board because the Electricity Board has not paid its outstanding dues to the Forest Department for the last four years ?